

# ಕಲಾತ್ಮಕ ಜೇನುಗೂಡು

ಎಲ್ಲಾ ಜೇನ್ನೊಣಗಳು ಕುಟುಕುವುದಿಲ್ಲ, ಒಂದು ಅಂದಾಜಿನ ಪ್ರಕಾರ ಇಪ್ಪತ್ತು ಸಾವಿರ ಜೇನ್ನೊಣಗಳ ಪೈಕಿ ಸುಮಾರು ಐನೂರು ಪ್ರಭೇದಗಳು ಕಚ್ಚುವ ಸಾಮರ್ಥ್ಯವನ್ನು ಕಳೆದುಕೊಂಡಿವೆ. ಆದರೆ ಶತ್ರುಗಳಿಂದ ತೊಂದರೆಯಾದಾಗ ಅವುಗಳನ್ನು ಕಚ್ಚುವುದೋ ಅಥವಾ ಮೇಣ, ಸಸ್ಯದ ರಾಳ ಅಥವಾ ಮಣ್ಣಿನ ಮಳೆಯನ್ನು ಸುರಿಸುವಂತಹ ರಕ್ಷಣಾತ್ಮಕ ನಡವಳಿಕೆಯನ್ನು ಪ್ರದರ್ಶಿಸುತ್ತವೆ.

ಆಸ್ಟ್ರೇಲಿಯಾದಲ್ಲಿ ಒಟ್ಟು ಹದಿನಾಲ್ಕು ಜಾತಿಯ ಕುಟುಕದಿರುವ ಜೇನ್ನೊಣಗಳಿವೆ. ಇವುಗಳಲ್ಲಿ ಸಕ್ಕರೆ ಚೀಲ (ಶುಗರ್ ಬ್ಯಾಗ್) ಜೇನ್ನೊಣ ಅಥವಾ ಬುಶ್ ಜೇನ್ನೊಣಗಳು ತಯಾರಿಸುವ ಜೇನುಗೂಡುಗಳು ಸುಂದರ ಮಾತ್ರವಲ್ಲ, ತುಂಬ ಕಲಾತ್ಮಕವಾಗಿವೆ.

ಟೆಟ್ರಾಗೊನುಲಾ ಕಾರ್ಬೋನೇರಿಯಾ ಎಂಬ ವೈಜ್ಞಾನಿಕ ಹೆಸರುಳ್ಳ ಸಕ್ಕರೆ ಚೀಲ ಜೇನ್ನೊಣಗಳು ಇತರೇ ಕುಟುಕದಿರುವ ಜೇನ್ನೊಣಗಳಿಗೆ ಹೋಲಿಸಿದರೆ ಗಾತ್ರದಲ್ಲಿ ಚಿಕ್ಕವು. ಇವು ಪ್ರಧಾನವಾಗಿ ಕಪ್ಪು ಬಣ್ಣವನ್ನು ಹೊಂದಿವೆ ಹಾಗೂ ಇವುಗಳ ದೇಹವು ಸೂಕ್ಷ್ಮವಾದ ಕೂದಲುಗಳಿಂದ ಆವೃತವಾಗಿರುತ್ತದೆ. ಸಕ್ಕರೆ ಚೀಲ ಜೇನ್ನೊಣಗಳು ವಿಶಿಷ್ಟ ಸುರುಳಿಯಾಕಾರದ ಮಾದರಿಯಲ್ಲಿ ಜೇನುಗೂಡುಗಳನ್ನು ನಿರ್ಮಿಸುತ್ತವೆ. ಈ ಜೇನುಗೂಡುಗಳು ವಿಶಾಲ ಹಾಗೂ ಚಪ್ಪಟೆಯಾಗಿರುತ್ತವೆ. ಆದರೆ ಪ್ರತೀ ಸುರುಳಿ ತಿರುಗುವಿಕೆಯು ಎತ್ತರದಲ್ಲಿ ಏರಿಕೆಯಾಗಿ ಜೇನುಗೂಡಿಗೆ ಸಮತಟ್ಟಾದ ಶಂಕುವಿನಾಕಾರವನ್ನು ನೀಡುತ್ತದೆ. ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ಗೂಡು ಸುಮಾರು ಇಪ್ಪತ್ತು ಸುರುಳಿಗಳನ್ನು ಒಳಗೊಂಡಿರುತ್ತದೆ.

ಈ ಜೇನುಗೂಡುಗಳು ಕೇವಲ ಒಂದು ಪ್ರವೇಶ ದ್ವಾರವನ್ನು ಹೊಂದಿವೆ. ಈ ದ್ವಾರವು ಜೇನುಮೇಣ ಹಾಗೂ ರಾಳಗಳ ಮಿಶ್ರಣದಿಂದ ಲೇಪಿಸಲ್ಪಟ್ಟಿದೆ ಹಾಗೂ ಕಾವಲು ಜೇನುನೊಣಗಳಿಂದ ರಕ್ಷಿಸಲ್ಪಟ್ಟಿದೆ. ರಾಳದಲ್ಲಿರುವ ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳು, ಜೇನ್ನೊಣಗಳು ಗೂಡಿನೊಳಗೆ ಪ್ರವೇಶಿಸುವಾಗ ಇದ್ದಿರಬಹುದಾದ ಯಾವುದೇ ಬಗೆಯ ರೋಗಕಾರಕಗಳನ್ನು ಸ್ವಚ್ಛಗೊಳಿಸುತ್ತವೆ, ಅಷ್ಟೇ ಅಲ್ಲ ಇರುವೆ ಹಾಗೂ ಜೀರುಂಡೆಗಳಂತಹ ಪರಭಕ್ಷಕಗಳನ್ನು ಸಹ ಹೊರಗಿಡುತ್ತವೆ.

■ ವಿದ್ಯಾ ವಿ. ಹಾಲಭಾವಿ